ಶ್ರೀ ಬಸವರಾಜ ರಾಯರೆಡ್ಡಿ : ಈ ಚುನಾವಣೆ ಬಗ್ಗೆ ಉತ್ತರ ಹೇಳಬೇಕು. ಇಲ್ಲ ಅಂದರೆ ನಾವು ಧರಣೆ ಕುಳಿತು ಕೊಳ್ಳ ಬೇಕಾಗುತ್ತದೆ.

ಛೇರ್ಮನ್ : ಬೇರೆ ಪ್ರಶ್ನೆ ಕೇಳಿ ಎಂದು ಹೇಳಲಿಲ್ಲವೆ?

(ಮಾನ್ಯ ಸದಸ್ಯರಾದ ಶ್ರೀ ಬಸವರಾಜ ರಾಯರೆಡ್ಡಿಯವರು ಅಧ್ಯಕ್ಷ ಪೀಠದ ಇರುವ ಮೆಟ್ಟಲಿನ ಮೇಲೆ ಬಂದು ಕುಳಿತರು)

ಶ್ರೀ ಆರ್.ಎನ್. ನಾಯಕ್ : ಅವರನ್ನು ಹೊರಗೆ ಕಳುಹಿಸಿ, ಕೊಶ್ಚನ್ ಅವರ್‌ನಲ್ಲಿ ಹೀಗೆ ಮಾಡಬಹುದೆ? ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು ಮೇಡಂ.

Sri. Basavaraja Raya Reddy : Let him say yes or no,

(ಗೊಂದಲ)

ಛೇರ್ಮನ್ : ನಿಮ್ಮ ಕೊಶ್ಚನ್ ಲ್ಯಾಪ್ಸ್ ಆಯಿತು.

ಛೇರ್ಮನ್ : ಯಂಕನಾಯ್ಕರವರು ಹೇಳುವುದಲ್ಲದೆ ಬೇರೆ ಯಾವುದೂ ರೆಕಾರ್ಡ್ ಆಗುವುದು ಬೇಡ.

(ಗೊಂದಲ)

ಛೇರ್ಮನ್ : ನೀವು ನಿಮ್ಮ ಸಹಪಾಠಿಗಳ ಕ್ವಶ್ಚನ್ ಕೇಳುವುಕ್ಕೆ ಅವಕಾಶ ಕೊಡಬೇಕು. ಇಲ್ಲದಿದ್ದರೆ ಸಭೆ ಹೇಗೆ ನಡೆಸುವುದು?

ಶ್ರೀ ಡಿ.ಎ. ಚಿನ್ನಪ್ಪ : ಅಧ್ಯಕ್ಷರೇ, ಅವರು ಅಪೊಜಿಷನ್ ವಿಫ್. ಅವರು ಏಕೆ ಇಲ್ಲಿ ಬಂದು ಕುಳಿತಿದ್ದಾರೆ.

ಛೇರ್ಮನ್ : ಹೋಗಲಿ ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

(ಶ್ರೀ ಬಸವರಾಜ್ ರಾಯರೆಡ್ಡಿಯವರನ್ನು ಇತರ ಸದಸ್ಯರು ಅವರ ಸ್ಥಾನಕ್ಕೆ ಕರೆದೊಯ್ದರು)

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಚುನಾವಣೆ ಮಾಡುವುದಾದರೆ ಮಾಡುತ್ತೇವೆಂದು ಹೇಳಿ, ಇಲ್ಲದಿದ್ದರೆ ಇಲ್ಲವೆಂದು ಹೇಳಿ ಏಕೆ ಸುಮ್ಮನೆ ಕಿರಿಕಿರಿ.

ಛೇರ್ಮನ್ : ಗುರುಪಾದಪ್ಪನವರಿಗೆ, ನೀವು ಇಂಥ ಸೀನಿಯರ್ ಮೆಂಬರ್ ಏಕೆ ಗದ್ದಲ ಮಾಡುತ್ತೀರಿ?

ಹರಪನ ಹಳ್ಳಿ ತಾಲ್ಲೂಕಿನ ಹರಿಜನ ಮತ್ತು ಲಂಬಾಣಿ ತಾಂಡಗಳಲ್ಲಿ ಹಾನಿಯಾದ ದೇವಸ್ಥಾನಗಳ ಸಂಖ್ಯೆ

724 - ಶ್ರೀ ಬಿ.ಹೆಚ್. ಯಂಕಾನಾಯ್ಕ : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಹರಿಜನ ಮತ್ತು ಲಂಬಾಣಿ ತಂಡಗಳಲ್ಲಿ ಮತ್ತು ಇತರ ಹಳ್ಳಿಗಳಲ್ಲಿ ಹಾನಿಗೊಂಡ ಪೂಜಾ ಸ್ಥಾನಗಳ ಸಂಖ್ಯೆ ಎಷ್ಟು?

ಆ) ಈ ದೇವಸ್ಥಾನಗಳ ದುರಸ್ತಿ ಕಾರ್ಯವನ್ನು ಸರಕಾರದ ವತಿಯಿಂದ ಮಾಡಿಸಲು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿಗಳು):

ಅ) ಹರಿಜನ ದೇವಸ್ಥಾನ	50
ಲಂಬಾಣಿ ತಂಡ	39
ಇತರ ದೇವಸ್ಥಾನಗಳು	186
	275

ಆ) ಪರಿಶೀಲಿಸಲಾಗುವುದು.

ಶ್ರೀ ಬಿ.ಹೆಚ್. ಯಂಕಾನಾಯ್ಕ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮೊದಲನೆಯ ಪ್ರಶ್ನೆಗೆ ಪರಿಶೀಲನೆ ಮಾಡಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. ಅವರು ಯಾವಾಗ ಪರಿಶೀಲನೆ ಮಾಡುತ್ತಾರೆ. ಮೊನ್ನೆ ಮಳೆ, ನೆರೆಹಾವಳಿಯಿಂದ ಬಿದ್ದ ಮನೆಗಳು ಇವು, ಹರಿಜನ ಕೇರಿಯಲ್ಲಿ 50 ಲಂಬಾಣಿ ತಾಂಡದಲ್ಲಿ, 39, ಮತ್ತು ಇತರೇ 186 ಒಟ್ಟು 275ದೇವಸ್ಥಾನಗಳು ನಾಶವಾಗಿರುವುದರಿಂದ ಇವನ್ನು ಸರ್ಕಾರದ ವತಿಯಿಂದ ಪರಿಶೀಲನೆ ಮಾಡಲಾಗುವುದೆಂದು ತಿಳಿಸಿದ್ದಾರೆ. ಜಾಗ್ರತೆಯಾಗಿ ಸರ್ಕಾರದ ವತಿಯಿಂದ ಈ ಕಾರ್ಯಕ್ರಮವನ್ನು ಕೈಗೊಳ್ಳುವಿರಾ, ಎಂದು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಮಾನ್ಯ ಅಧ್ಯಕ್ಷರೆ, ಸುಮಾರು 275 ದೇವಸ್ಥಾನಗಳು ಈ ನೆರೆಹಾವಳಿಯಿಂದ ನಷ್ಟಕ್ಕೀಡಾಗಿವೆ ಈಗಾಗಲೇ ತಹಶೀಲ್ದಾರರು ಒಂದು ರಫ್ ಎಷ್ಟಿಮೆಂಟನ್ನು ತಯಾರು ಮಾಡಿದ್ದಾರೆ. ಅದು ಮೂವತ್ತೇಳು ಲಕ್ಷದ ಎಪ್ಪತ್ತೇಂಟು ಸಾವಿರದ ಐನ್ನೂರಕ್ಕೆ ಮಾಡಿದ್ದಾರೆ. ಈ ಎಸ್ಟಿಮಂಟ್ ಬಂದ ಮೇಲೆ ಅದನ್ನು ಪರಿಶೀಲನೆ ಮಾಡಿ ಫ್ಲಡ್ ರಿಲೀಫ್ ಫಂಡ್ ನಿಂದ ಈ ದೇವಸ್ಥಾನಗಳ ದುರಸ್ಥಿಯನ್ನು ತೆಗೆದುಕೊಳ್ಳುತ್ತೇವೆನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಬಿ.ಹೆಚ್. ಯಂಕಾನಾಯ್ಕ : ಆಯಿತು.

ಶ್ರೀ ಎಸ್. ರಮೇಶ್ : ಇದೇ ಸಂದರ್ಭದಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ.

ಮೊನ್ನೆ ಎಲ್ಲಾ ಕಡೆ 150 ದೇವಸ್ಥಾನಗಳ ಬಗ್ಗೆ ಗಲಾಟೆಯಾಯಿತು. ಆ ಸಂದರ್ಭದಲ್ಲಿ ಕೆಲವು ದೇವಸ್ಥಾನಗಳಿಗೆ ಏಟು ಬಿದ್ದಿದೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಸುಮಾರು 7-8 ದೇವಸ್ಥಾನಗಳಿಗೆ ಏಟು ಬಿದ್ದಿದೆ. ಸರ್ಕಾರವತಿಯಿಂದ ಏನಾದರೂ ರಿಪೇರಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

ಛರ್ಮನ್ : ನಿಮ್ಮ ಕ್ಷೇತ್ರದ ಪ್ರಶ್ನೆ ಕೇಳಿ.

ಶ್ರೀ ಎಸ್. ರಮೇಶ್ : ಈ ಮೊನ್ನೆ ಅಯೋಧ್ಯೆ ಗಲಭೆಯ ಸಂದರ್ಭದಲ್ಲಿ ದೇವಸ್ಥಾನಗಳಿಗೆ ಏಟು ಬಿದ್ದಿದೆ.